# ಖುಷಿಗಾಗಿ ಶ್ರಮ

ರಾಮ್‌ಜಿ ಕೆ.ಎಸ್.
ಕಲರ್ಸ್ ಸೂಪರ್‌ನ 'ಬಂಗಾರಿ' ನಿರ್ದೇಶಕ



★ ***'ಬಂಗಾರಿಯ' ಬಾಗಿಲಲ್ಲಿ ನಿಂತು ಹಿಂದಕ್ಕೆ ತಿರುಗಿದರೆ ಏನೇನು ನೆನಪಿಗೆ ಬರುತ್ತವೆ?***

ಇನ್ನೂ ಏನೂ ಮಾಡಿಲ್ಲ. ಕಡಿದು ಕಟ್ಟೆ ಹಾಕಿದ್ದು ಅಷ್ಟರಲ್ಲೇ ಇದೆ ಎನ್ನಿಸುತ್ತದೆ. ಈಗ ನಾನು ಏನೇ ಹೇಳಿದರೂ ಬೊಗಳೆ ಬಿಟ್ಟಂತೆ ಅನ್ನಿಸಬಹುದು. 'ರಾಧಾಕಲ್ಯಾಣ' 'ಪುಟ್ಟಗೌರಿ ಮದುವೆ' 'ಅಕ್ಕ' ಧಾರಾವಾಹಿಗಳನ್ನು ಮಾಡುತ್ತಿದ್ದೇನೆ. ಹೀಗೆ ಅನ್ನುವುದಕ್ಕಿಂತ ಸಂಪೂರ್ಣ ನನ್ನನ್ನು ನಾನು ತೊಡಗಿಸಿಕೊಂಡಿದ್ದೇನೆ. ನಿರ್ಮಾಣ, ನಿರ್ದೇಶನ ಕಥೆ– ಸಂಭಾಷಣೆ ಎಲ್ಲವನ್ನೂ ನಿಭಾಯಿಸುತ್ತಿದ್ದೇನೆ. ಇದರ ಜೊತೆ ವಾಹಿನಿಯ ಸಭೆ– ಓಡಾಟ ಎಲ್ಲವನ್ನೂ ಮಾಡಿದ್ದೆ. ಇಲ್ಲಿಯೂ ಬರವಣಿಗೆ, ನಿರ್ದೇಶನ, ನಿರ್ಮಾಣ ನನ್ನದೆ.

★ ***ಹೊಸ ಧಾರಾವಾಹಿಯ ಹೊಸತನದ ಬಗ್ಗೆ ಹೇಳಿ...***

ರಾಧಿಕಾ ಪಂಡಿತ್ ಅವರನ್ನು ಮತ್ತೊಮ್ಮೆ ಕಿರುತೆರೆಗೆ ತಂದಿದ್ದೇವೆ. ಅವರು ಮಾತ್ರ ಅಲ್ಲದೆ ಐಂದ್ರತಾ ರೈ, ರಾಗಿಣಿ, ಪ್ರಿಯಾಮಣಿ ಎಲ್ಲರೂ ಸೇರಿ 'ಬಂಗಾರಿ'ಯನ್ನು ಸಿಂಗಾರ ಮಾಡುತ್ತಾರೆ. ಬರಿ ನಟ ನಟಿಯರೇ ಕಥೆಯಲ್ಲಿದ್ದರೆ ಹೇಗೆ? ಏಕೆ ಪ್ರೇಕ್ಷಕನೂ ಬರಬಾರದು? ಹಾಗಾಗಿ ಪಾತ್ರಗಳ ಜೊತೆಗೆ ಪ್ರೇಕ್ಷಕನೂ ಕಥೆಯಲ್ಲಿ ಪ್ರವೇಶಪಡೆಯುತ್ತಾನೆ. ಕಥೆಯ ಬೀಜ ಕೇಂದ್ರದ ಸತ್ಯ ಪ್ರೇಕ್ಷಕನಿಗೆ ಗೊತ್ತಿರುತ್ತದೆ. ಅದನ್ನು ತಿಳಿಯುವ ಕುತೂಹಲ ಧಾರಾವಾಹಿಯ ಪಾತ್ರ ವರ್ಗದಲ್ಲಿ ಇದೆ. ಬೇರೆ ಧಾರಾವಾಹಿಗಳಲ್ಲಾದರೆ ಯಾವುದೋ ಒಂದೆರಡು ಪಾತ್ರಗಳಿಗೆ ಒಂದು ರಹಸ್ಯ ಸಂಗತಿ ಗೊತ್ತಿರುತ್ತದೆ. ಅದನ್ನು ಅವರು ಬಚ್ಚಿಡಲು ಸರ್ಕಸ್ ಮಾಡಿದರೆ, ಕೆಲವು ಪಾತ್ರಗಳು ಅದನ್ನು ಬಿಚ್ಚಿಡಲು ಪ್ರಯತ್ನ ಪಡುತ್ತವೆ. ಬಂಗಾರಿಯ ಪಾತ್ರಗಳು ಮನೋ ವೈಜ್ಞಾನಿಕ ನೆಲೆಯಲ್ಲಿ ತಮ್ಮನ್ನು ತಾವು ಆತ್ಮ ವಿಮರ್ಶೆ ಮಾಡಿಕೊಳ್ಳುತ್ತಾ ಸಾಗುತ್ತವೆ.

★ ***ಇಲ್ಲಿ ಯಾವ ಕುತೂಹಲವನ್ನು ಬೆಳೆಸಿಕೊಂಡು ಹೋಗುತ್ತಿದ್ದೀರಿ?***

ಬಂಗಾರಿ, ಬಂಗಾರದಂತಹ ಹೆಣ್ಣು ಮಗು. ಅತ್ಯಂತ ಮುಗ್ಧ ಮಗು. ಆಕೆಗೆ ತಾಯಿ ಇಲ್ಲ. ತನ್ನ ತಂದೆಯ ಹೊಟ್ಟೆಯಲ್ಲಿ ಹುಟ್ಟಿದ್ದೇನೆ ಎಂದು ಆಕೆ ತಿಳಿದುಕೊಂಡಿರುತ್ತಾಳೆ. ಆಕೆಯ ಶಾಲೆಯಲ್ಲಿ ಒಂದು ದಿನ 'ಮದರ್ಸ್ ಡೇ' ಆಚರಿಸುತ್ತಾರೆ. ಆಗ ಶಿಕ್ಷಕಿ ತಾಯಿಯ ಮಹತ್ವವನ್ನು ಮಕ್ಕಳಿಗೆ ತಿಳಿಸುತ್ತಾರೆ. ಬಂಗಾರಿಗೆ ಆಗ ಅನುಮಾನ ಹುಟ್ಟುತ್ತದೆ. ತಂದೆಯನ್ನು ಬಂದು ಕೇಳುತ್ತಾಳೆ. ತಕ್ಷಣ ತಂದೆಗೆ ಕೋಪ ಬರುತ್ತದೆ; ಹೊಡೆದು ಬಿಡುತ್ತಾರೆ. ಆಕೆ ತನ್ನ ಹಠವನ್ನು ಬಿಡುವುದಿಲ್ಲ. ದೇವರ ಹತ್ತಿರ ಹೋಗಿದ್ದಾರೆ ಎಂದು ಹೇಳಿ ಸಮಾಧಾನ ಮಾಡುತ್ತಾನೆ. ಹಾಗೆಂದರೆ ಏನು ಅನ್ನುವುದೂ ಆಕೆಗೆ ಗೊತ್ತಿರುವುದಿಲ್ಲ. ಸ್ನೇಹಿತರಿಂದ ಸತ್ತಿದ್ದಾರೆ ಎಂಬ ಅರ್ಥ ಗೊತ್ತಾಗುತ್ತದೆ. ಆದರೆ ತನ್ನ ತಾಯಿ ಸತ್ತಿಲ್ಲ ಎಂಬ ಅಚಲ ಭಾವನೆ ಆಕೆಯಲ್ಲಿ ಮೂಡುತ್ತದೆ. ಅದರ ಹುಡುಕಾಟದಲ್ಲಿ ಆಕೆ ತೊಡಗುತ್ತಾಳೆ.

★ ***ಎಲ್ಲಾ ಟಿವಿಗಳಲ್ಲಿಯೂ ಮಗುವಿನ ಪ್ರಧಾನ ಪಾತ್ರದಲ್ಲಿ ಧಾರಾವಾಹಿ ಮಾಡುತ್ತಿರುವುದು ಅನುಕರಣೆ ಅನ್ನಿಸಲ್ವಾ?***

ನಿಜಕ್ಕೂ ಹಾಗೆನಿಸುತ್ತದೆ. ಕಥೆಯ ಕೇಂದ್ರದಲ್ಲಿ ಎಲ್ಲೋ ಸಾಮ್ಯತೆ ಕಾಣಿಸುತ್ತದೆ. ಆದರೆ ಇದು ಅಂತಹ ಕಥೆ ಅಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಎರಡು ವರ್ಷದ ಹಿಂದೆಯೇ ಈ ಕಥೆಯ ಕಲ್ಪನೆ ನನಗೆ ಇತ್ತು. ಇನ್ನೂ ನಾಲ್ಕೈದು ಧಾರಾವಾಹಿಗಳ ಕಥೆ ನನ್ನ ಹತ್ತಿರ ಇವೆ. ಭಯಾನಕ, ಸಾಹಸ ಪ್ರಜ್ಞೆಯ ಕಥೆಗಳೂ ಇವೆ. ಹಾವಿನ ಕಥೆಯೂ ನನ್ನ ಹತ್ತಿರ ಒಂದಿತ್ತು. ಮಗುವನ್ನು ಪ್ರಧಾನ ಭೂಮಿಕೆಯಲ್ಲಿ ಇಟ್ಟು ಕಥೆ ಹೇಳುವ ಸ್ವರೂಪ ಸಹಜ ಅನ್ನಿಸಿದರೂ ನಿರ್ವಹಿಸುವ ಬಗೆ ಬೇರೆ ಇದೆ.

★ ***ನಿಮ್ಮ ಮೊದಲ ಕಥೆಗಳ ಸ್ಥಿತ್ಯಂತರ ಉದ್ದೇಶಪೂರ್ವಕವಾಗಿತ್ತಾ?***

ಖಂಡಿತ ಅಂತಹ ಉದ್ದೇಶ ಇಟ್ಟುಕೊಂಡು ನಾನು ಕಥೆ ಬರೆಯುವುದೇ ಇಲ್ಲ. ಮೂಲತಃ ಯಾವುದನ್ನೂ ಸುಲಭಕ್ಕೆ ಒಪ್ಪುವ ಜಾಯಮಾನ ನನ್ನದಲ್ಲ. ಏನಿದ್ದರೂ ನನ್ನ ಕೆಲಸ ನನಗೆ ಅಚ್ಚರಿಯನ್ನು ಹುಟ್ಟಿಸಬೇಕು. ಅದೇ ನನ್ನ ಮಾನದಂಡವೇ ಹೊರತು ಟಿಆರ್‌ಪಿ ಅಲ್ಲ. ಯಾರನ್ನೋ ಮೆಚ್ಚಿಸಬೇಕು ಎನ್ನುವ ಲೆಕ್ಕಾಚಾರವೂ ಇರುವುದಿಲ್ಲ. ಪುಟ್ಟಗೌರಿ ಮದುವೆ ತನ್ನ ಟಿಆರ್‌ಪಿಯಲ್ಲಿ ದಾಖಲೆಯನ್ನೇ ನಿರ್ಮಿಸಿದೆ. ನಾನು ಖುಷಿ ಪಟ್ಟಿದ್ದು ಅದಕ್ಕಲ್ಲ. ನಮ್ಮ ತಂಡ ದೇಶವನ್ನೆಲ್ಲಾ ಸುತ್ತಿ ನಿರ್ಮಿಸಿದೆ ಎನ್ನುವುದಕ್ಕೆ. ಯಾವ ಒತ್ತಡವೂ ನಮ್ಮ ಮೇಲೆ ಇರಲಿಲ್ಲ. ಆದರೂ ಸುತ್ತಾಡಿದ್ದೇವೆ. ಲೆಕ್ಕಾಚಾರ, ದುಡ್ಡು ಅಂತ ತಲೆಕೆಡಿಸಿಕೊಳ್ಳುವುದಿಲ್ಲ. ಅದಕ್ಕೆ ಆರಾಮಾಗಿ ಮಾಡಲು ಸಾಧ್ಯವಾಗಿದೆ.

★ ***ಟಿವಿಯಲ್ಲಿ ತೊಡಗಿದ್ದು ಹೇಗೆ?***

ನಾನು ಟಿವಿಯನ್ನೇ ನೋಡುತ್ತಿರಲಿಲ್ಲ. ಸಾಫ್ಟ್‌ವೇರ್ ಕಂಪೆನಿಯಲ್ಲಿ ಎಂಜಿನಿಯರ್ ಆಗಿದ್ದೆ. ಅಲ್ಲಿನ ಏಕತಾನತೆಯಿಂದ ಪಾರಾಗಲು ಏನಾದರೂ ಮಾಡಬೇಕು ಅಂತ ಹೊರಬಂದೆ. ಸಿನಿಮಾ ಮಾಡುವ ಉದ್ದೇಶ ಇತ್ತು. ಅಲ್ಲಿಗೆ ಹೋಗಬೇಕಾದವನು ದಾರಿ ತಪ್ಪಿ ಇಲ್ಲಿಗೆ ಬಂದೆ. ಇಲ್ಲಿಗೆ ಬಂದ ಮೇಲೆ ಎರಡೂ ಒಂದೇ ರೀತಿಯ ಕೆಲಸ ಅಂತ ಇಲ್ಲೇ ಮುಂದುವರಿದಿದ್ದೇನೆ. ಕೋಲಾರದ ಮಾಲೂರು ತಾಲ್ಲೂಕಿನ ಯಾನಾದಹಳ್ಳಿ ನಮ್ಮೂರು.

■ ರಾಗು